Sri H. SIDDAVEERAPPA.—The Power Loom Industry is in existence.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಪವರ್ ಲೂಮುಗಳನ್ನು ಸರ್ಕಾರದವರಿಗೇ ಕೊಟ್ಟರೆ ಕೊಂಡು ಕೊಳ್ಳಲು ಸಿದ್ಧವಾಗಿದ್ದಾರೆಯೆ?

ಶ್ರೀ ಎಚ್. ಸಿದ್ದವೀರಪ್ಪ,—ಯೋಚನೆ ಮಾಡಬೇಕಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಶ್ರೀ ಮಾದಯ್ಯನವರು ತಮ್ಮ ಪವರ್‌ಲೂಮುಗಳನ್ನು ಸರ್ಕಾರದವರೇ ತೆಗೆದುಕೊಂಡು ಸಾಲ ತೀರಿಸಿಕೊಳ್ಳಬಹುದೆಂದು ಹೇಳಿದ್ದಾರೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ನನ್ನನ್ನು ಋಣ ಮುಕ್ತನನ್ನಾಗಿ ಮಾಡಿ ಎಂದು ಕೇಳಿ ಕೊಳ್ಳುತ್ತಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅದನ್ನು ವಹಿಸಿಕೊಳ್ಳುವುದರಿಂದ ಆವರ ಸಾಲ ತೀರ್ಮಾನವಾಗಬಹುದೆಂದು ತಿಳಿದುಕೊಂಡಿದ್ದಾರೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಎಚ್. ತಮ್ಮಯ್ಯ ಉರುಫ್ ಹನುಮಂತೇಗೌಡರ ತಮ್ಮಯ್ಯ.—ಸ್ವತ್ತನ್ನು ಆಧಾರಮಾಡಿಕೊಳ್ಳುವಾಗ ಪೂರ್ವಾದಿಯನ್ನೆಲ್ಲಾ ನೋಡಿದ್ದಾರೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಸ್. ಎಚ್. ತಮ್ಮಯ್ಯ.—ಬೇರೆ ಯಾವುದಾದರೂ ಇದ್ದರೂ ಸರ್ಕಾರಕ್ಕೇ first preference ಇದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಕಾನೂನಿಗೆ ಸಂಬಂಧ ಪಟ್ಟ ಪ್ರಶ್ನೆ; ಇದಕ್ಕೆ ಸುಲಭವಾಗಿ ಜವಾಬುಕೊಡುವ ಹಾಗಿಲ್ಲ.

ಶ್ರೀ ಶಿವನಂಜೇಗೌಡ.—ಅವರು ಆ ಕೈಗಾರಿಕೆಯನ್ನು ಪ್ರಾರಂಭಿಸುವ ಮುನ್ನ ಅವರಿಗೆ ಸಾಕಾಗುವಷ್ಟು ನೂಲಿನ ಸರಬರಾಯಿಯನ್ನು ಸರ್ಕಾರದವರು ಒದಗಿಸಿಕೊಡುವುದಾಗಿ ಭರವಸೆ ನೀಡಿದ್ದುದು ನಿಜವೇ?

ಶ್ರೀ ಎಚ್. ಸಿದ್ದವೀರಪ್ಪ,—ಸರ್ಕಾರಕ್ಕೆ ಸರಬರಾಯಿಯಾಗುತ್ತಿದ್ದ ನೂಲಿನ ಪ್ರಮಾಣದಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಹಂಚಬೇಕೆಂಬ ನಿಯಮವಿತ್ತೋ ಅದಕ್ಕನುಗುಣವಾಗಿ ಭರವಸೆ ನೀಡಿರಬಹುದು.

ಶ್ರೀ ಶಿವನಂಜೇಗೌಡ.—ಅವರು ಹಾಗೆ ಸರ್ಕಾರದಿಂದ ಭರವಸೆ ಪಡೆದು ಮಾಡಿದ್ದರೆಂದು ತಿಳಿಯಬಂದರೆ ಅವರನ್ನು ಋಣ ಮುಕ್ತರನ್ನಾಗಿ ಮಾಡಲು ಅವರು ತಿಳಿಸುವ ನಿಯಮಗಳಿಗನುಗುಣವಾಗಿ ಆ ವಿಷಯವನ್ನು ಪರಾಂಬರಿಸುವುದಾಗಿ ತಾವು ಮನಸ್ಸು ಮಾಡುವಿರಾ?

(ಉತ್ತರವಿಲ್ಲ)

Annual requirement of charcoal for Mysore Iron and Steel Works, Bhadravati.

Q.—268. Sri S. GOPALA GOWDA (Sagar-Hosanagar).—

Will the Government be pleased to state :—

(*a*) the annual requirement of charcoal for the old pig iron furnace in the Mysore Iron and Steel Works, Bhadravati;

(*b*) the annual requirement of charcoal for the new electric furnace;

(*c*) the productive capacities of both furnaces?

A.—Sri H. SIDDAVEERAPPA (Minister for Home and Industries).—

(*a*) 25,000 tons (charcoal, or coke or mixture of both).

(*b*) 30,000 tons (for 2 Electric Furnaces).

(*c*) The productive capacities of both the furnaces are noted below :—

(*i*) Blast Furnace—

About 25,000 tons per annum depending on grades.

(*ii*) Two Electric Pig Iron Furnaces—

About 60,000—65,000 tons per annum depending on grades.

ಶ್ರೀ ಎಸ್. ಗೋಪಾಲಗೌಡ.—ಭದ್ರಾವತಿ ಹಳೆಯ ಫರ್ನೇಸನ್ನು ಮುಚ್ಚಲು ಸರ್ಕಾರ ಆಲೋಚನೆಮಾಡುವುದೇ?

Sri H. SIDDAVEERAPPA.—It is a matter on which the Government have to proceed on technical advice.

ಶ್ರೀ ಎಸ್. ಗೋಪಾಲಗೌಡ.—ಈಗ ಅದರಿಂದ ನಷ್ಟವಾಗುತ್ತಿದೆಯಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ —ಈಗಿನ ಪ್ರೊಡಕ್ಷನ್ ಲೆವಲ್ಲನ್ನು ಮೈಂಟೇನ್ ಮಾಡಲು ನಾವು ಇದನ್ನು ಇಟ್ಟುಕೊಂಡಿದ್ದೇವೆ. And, as the Hon'ble Member is aware, only one electric furnace has already commenced production and the other is yet to commence production by the end of May or June. In order to keep our production level, we have to keep it working.

Gradation list of Agriculture Inspectors

Q.—425. Sri R. MUNISWAMIAH (Bangalore North—Scheduled Castes).—Will the Government be pleased to state :—

(*a*) whether a gradation list of Agriculture Inspectors is maintained in the Agriculture Department ;

(*b*) the names of the Agriculture Inspectors raised, in supersession, in the Agricultural Inspectors' cadre ?

A.—Sri H. SIDDAVEERAPPA (Minister for Home and Industries).—

(*a*) Yes ;

(*b*) II Grade Agricultural Inspectors ;

Sriyuths—

1 P. Muddappa.
2 B. T. Subramanyaswamy.
3 B. Y. Swamy.
4 C. Y. Narayanaswamy.
5 A. H. Ramanatha.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಐದು ಜನ ವ್ಯವಸಾಯದ ಇನ್ಸ್ಪೆಕ್ಟರುಗಳನ್ನು ಸೂಪರ್ ಸೀಡ್ ಮಾಡಿ ಮೇಲಕ್ಕೇರಿಸಲು ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಆಗ್ಗೆ ಕಾರ್ಟ್ ಸ್ಕೀಮ್ ಎಂಬುದಾಗಿ ಒಂದು ಸ್ಕೀಮನ್ನು ಸರ್ಕಾರದವರು ಮಾಡಿದ್ದರು. ಈ ಐದು ಜನರಿಗೆ ಆ ಸ್ಕೀಮಿನಲ್ಲಿ ದಕ್ಷತೆಯಿದ್ದುದಕ್ಕಾಗಿ, ಅದನ್ನು ಸರ್ಕಾರದವರು ಮನಗಂಡು ಈ ಐದು ಜನರನ್ನು ಅಲ್ಲಿಗೆ ಹಾಕಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ಆ ಸ್ಕೀಮು ಜಾರಿಯಲ್ಲಿರುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. I may also add that, as the scheme st arts, it will not affect the seniority of other Agriculture Inspectors. Without in any way prejudicing the seniority of other Inspectors these people have been given appointments.

Tannery in Pavagada Taluk.

Q.—463. Sri C. T. HANUMANTHAIYA (Pavagada—Scheduled Castes).—

Will the Government be pleased to state :—

(*a*) whether it has come to their notice that a tannery has been constructed for tanning in Pavagada Taluk ;

(*b*) the amount spent by Government on this ?

A.—Sri H. SIDDAVEERAPPA (Minister for Home and Industries).—

(*a*) Yes.

(*b*) Rs. 18,780 for the building.

ಶ್ರೀ ಸಿ. ಟಿ. ಹನುಮಂತಯ್ಯ.—ಆ ಕಟ್ಟಡ ಪೂರ್ತಿಯಾಗಿ ಎಷ್ಟು ದಿವಸವಾಯಿತು ?

ಶ್ರೀ ಎಚ್. ಸಿದ್ದವೀರಪ್ಪ.—ರಿವೈಸ್ಡ್ ಎಸ್ಟಿಮೇಟ್ ತಯಾರಾಗಿದೆ. ಇಷ್ಟೇ ದಿವಸವಾಯಿತೆಂಬುದು ಗೊತ್ತಾಗುವುದಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಇದನ್ನು ಇನ್ನೂ ಪ್ರಾರಂಭಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಕಟ್ಟಡವಾಗಿದೆ ಶೀಘ್ರದಲ್ಲೇ ಪ್ರಾರಂಭಿಸಲು ಬಜೆಟ್ಟಿನಲ್ಲಿ ಹಣವನ್ನೊದಗಿಸಲಾಗಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಅದು ಯಾವ ಬಜೆಟ್ ಸ್ವಾಮಿ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಜೆಟ್ ತಮ್ಮ ಕೈಯಲ್ಲೇ ಇದೆ.

Illicit sale of Ganja.

Q—7. Sri S. KARIAPPA (Virupakshapura).

Will the Government be pleased to state :—

(*a*) whether it has come to their notice that the illicit sale of ganja out of illicit stocks of illicit growers is on the increase ;

(*b*) if the answer is in the affirmative, whether they would institute effective steps to bring the offenders to book ?